**ಮಳೆಗಾಲದಲ್ಲಿ ಮರದ ಕೆಳಗೆ ಬಂದು ನಿಂತರೆ, ತಲೆಯ ಮೇಲೆ ಅಮ್ಮನ ಸೆರಗು, ಬೇಸಿಗೆಯಲ್ಲಿ ತಂಪಾದ ನೆರಳು. ಹಕ್ಕಿ ಪಕ್ಕಿ ಹಾಡು. ಇದರ ಪೊಟರೆಯಲ್ಲಿ ಹಾವು ಮುಂಗಸಿ ಅಳಿಲಿನ ಆಟ... ಆ ಪ್ರದೇಶ ಈ ನಂಜಲ ಮರದ ಕೃಪೆಯಲ್ಲಿ ಏನೆಲ್ಲ ಪಡೆದಿದೆ ಎಂಬುದು ಒಂದು ಅಚ್ಚರಿ.**



ಊರ ಒಳಗಿನಿಂದ ನಿಸೂರಾಗಿ ಬಂದ ರಸ್ತೆ, ರೈಲು ನಿಲ್ದಾಣಕ್ಕೆ ತಿರುಗುವಲ್ಲಿ ಒಂದು ಪೊಲೀಸ್ ಠಾಣೆ ಇದೆ. ಇಲ್ಲಿ ಮತ್ತೊಂದು ರಸ್ತೆ ಬಂದು ಸೇರಿಕೊಂಡು ಒಂದು ಚೌಕ ಏರ್ಪಟ್ಟಿದೆ, ಜೊತೆಯಲ್ಲಿಯೇ ಒಂದು ನಂಜಲು ಮರ ಬಹಳ ವರ್ಷಗಳಿಂದ ಇಲ್ಲಿ ಕಾಲೂರಿ ನಿಂತಿದ್ದು ಕೂಡ ಈ ಸ್ಥಳಕ್ಕೆ ಮಹತ್ವ ಬರಲು ಕಾರಣ. ಪೊಲೀಸ್ ಚೌಕ, ನಂಜಲ ಚೌಕ, ರೈಲ್ವೆ ಸ್ಟೇಷನ್ ಚೌಕ ಎಂದೆಲ್ಲ ಬೇರೆ ಬೇರೆ ಜನ ವಿವಿಧ ಹೆಸರುಗಳಿಂದ ಈ ಜಾಗವನ್ನು ಕರೆಯುತ್ತಿದ್ದರೂ ಎಲ್ಲರೂ ಇದನ್ನ ಒಪ್ಪಿಕೊಂಡಿದ್ದರು. ಊರಿನ ಜನ ಇದನ್ನ ಒಂದು ಗೊಂದಲ, ಗಡಿಬಿಡಿ ಎಂದೆಲ್ಲ ತೆಗೆದುಕೊಂಡಿರಲಿಲ್ಲ. ಎಲ್ಲ ಒಪ್ಪಿಕೊಂಡ ಮೇಲೆ ಯಾವ ದೊಣ್ಣೆ ನಾಯಕನ ಪರವಾನಿಗೆ ಬೇಕು ಹೇಳಿ; ಅಂತೂ ಈ ಚೌಕ ಅದರ ನಾನಾ ಹೆಸರುಗಳಿಂದಾಗಿ ಅವರವರು ಕರೆಯುವಂತೆಯೇ ಉಳಿಯಿತು, ಊರಿನ ಒಂದು ಪ್ರಮುಖ ಪ್ರದೇಶವಾಗಿ, ಸುಂದರ ತಾಣವಾಗಿ ಅಭಿವೃದ್ಧಿ ಕಂಡಿತು. ಎಲ್ಲದಕ್ಕೂ ಸಾಕ್ಷಿ ಎಂಬಂತೆ ಆ ನಂಜಲ ಮರ ಇಲ್ಲಿ ಉಳಿದಿತ್ತು ಬಹಳ ವರ್ಷಗಳಿಂದ.

ಈ ಚೌಕದ ಕಥೆ ಒಂದಾದರೆ, ಇಲ್ಲಿದ್ದ ನಂಜಲ ಮರದ ಕಥೆಯೇ ಇನ್ನೊಂದು. ಪೊಲೀಸರು ಸೀಸ್ ಮಾಡಿದ ಒಂದು ಜೀಪು, ಒಂದು ಲಾರಿ, ನಿವೃತ್ತ ಕಾನ್‌ಸ್ಟೇಬಲ್ ಫ್ರಾನ್ಸಿಸ್ ಮರದ ಬೊಡ್ಡೆಗೆ ತಗುಲಿದಂತೆ ಇರಿಸಿದ್ದ ಬೀಡಿ ಅಂಗಡಿ, ಇದರ ಮಗ್ಗುಲಲ್ಲಿ ಪೀರಸಾಬಿಯ ಪಂಕ್ಚರ್ ಅಂಗಡಿ, ಆ ತುದಿಯಲ್ಲಿ ಹೂವಿನ ಚಂದ್ರಮ್ಮನ ಹೂವಿನ ಅಂಗಡಿ, ಕೊಂಚ ದೂರದಲ್ಲಿ ರಸ್ತೆಯ ಮಗ್ಗುಲಲ್ಲಿ ಒಂದು ಟವಲ್ ಹಾಸಿಕೊಂಡು ರಾತ್ರಿ ಎಂಟರವರೆಗೆ ಕಾಯಂ ಆಗಿ ಕೂತಿರುತ್ತಿದ್ದ ಒಂದು ಕೈ, ಒಂದು ಕಾಲು ಇಲ್ಲದ ಮಿರಾಂಡ, ನಿತ್ಯ ಒಂದು ನಿಶ್ಚಿತ ಅವಧಿ ನೋಡಿಕೊಂಡು ತನ್ನ ಸೈಕಲ್ ತಂದು ನಿಲ್ಲಿಸಿಕೊಂಡು 'ಕಳ್ಳೆಕಾಯ್ ಕಳ್ಳೇಕಾಯ್' ಎಂದು ವ್ಯಾಪಾರ ಮಾಡುವ ಬಸ್ತು, ಅಲ್ಲಿ ಮೂಲೆಯಲ್ಲಿ ಹಳೇ ಚಪ್ಪಲಿ ನಡುವೆ ಕುಳಿತ ಮಾದೇವ, ಮರದಲ್ಲಿ ವರ್ಷಕ್ಕೊಮ್ಮೆ ನಂಜಲ ಹೂ ಬಿಟ್ಟು ಅದು ಹಣ್ಣಾದಾಗ ಹೆಕ್ಕುವ ಶಾಲಾ ಹುಡುಗರು, ಶಾಲೆಯನ್ನೇ ಮರೆತು ನಂಜಲನ್ನ ಸವಿಯುವ ಮಕ್ಕಳು, ಮರದ ಮೇಲೆ ಹಬ್ಬಿರುವ ಒಂದೆರಡು ಬಳ್ಳಿಮರದ ರೆಂಬೆ ಕೊಂಬೆಗಳ ನಡುವೆ ಕೂಗುವ ಹಕ್ಕಿ, ಈ ಹಕ್ಕಿಯ ಕೂಗಿನಲ್ಲಿ ಗಂಡು–ಹೆಣ್ಣನ್ನ ಗುರುತಿಸುವ, ಗುರುತಿಸಿ ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುವ ಪೋಲಿ ಘಟಿಂಗರು, ಇದನ್ನ ಗಮನಿಸುವ ಹಿರಿಯಜ್ಜಗಳು, ಬಂದುಹೋಗುವ ಒಂದು ಕೋತಿ ಗ್ಯಾಂಗು – ಇವರೆಲ್ಲರ ಜೊತೆಯಲ್ಲಿ